# ಸಂಶೋಧನೆ ಪಿ.ಎಚ್.ಡಿಗೆ ಸೀಮಿತವಾಗದಿರಲಿ

**ವಿಜಯಪುರ:** ಸಂಶೋಧನೆ ಪಿಎಚ್‌ಡಿ ಪದವಿಗೆ ಸೀಮಿತವಾಗದೆ ಸಮಾಜಕ್ಕೆ ಉತ್ತಮ ಕೊಡುಗೆಯಾಗಬೇಕಿದೆ ಎಂದು ರಾಣಿಚೆನ್ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ಕೆ.ಎಲ್.ಎನ್.ಮೂರ್ತಿ ಹೇಳಿದರು.

ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ, ಮಹಾವಿದ್ಯಾಲಯದ ಹಿರಿಯ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ಹಮ್ಮಿಕೊಂಡ ಸಂಶೋಧನೆ ವಿಷಯ ಕೇಂದ್ರಿತ ವಿಶೇಷ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಂಶೋಧನೆ ಎನ್ನುವುದು ನಿಂತ ನೀರಲ್ಲ. ಸದಾ ಹರಿಯುತ್ತಿರುವ ಹೊಸ ನೀರು. ಸಂಪೂರ್ಣ ಪರಿಶೀಲಿಸಿ, ವಿವೇಚಿಸಿ ಸಿದ್ಧಾಂತ ಮಂಡಿಸುವ ಕಾರ್ಯವೇ ಸಂಶೋಧನೆ. ಸತ್ಯಾಸತ್ಯತೆಗಳನ್ನು ಹೊರತೆಗೆದು ಪರಿಪೂರ್ಣ ವಿಷಯದ ಅಧ್ಯಯನಕ್ಕೆ ಸಂಶೋಧನೆ ಅವಶ್ಯ. ಸಂಶೋಧನೆಯ ಇನ್ನೊಂದು ಭಾಗವೆಂದರೆ ವಿಮರ್ಶೆ ಏಕೆಂದರೆ ವಿಮರ್ಶೆ ಮಾಡಿ ಸಂಶೋಧನೆಗೆ ಒಳ ಪಡಿಸಿದರೆ ಪರಿಪೂರ್ಣ ಮಾಹಿತಿ ದೊರೆಯುವುದು ಎಂದರು.

ನ್ಯೂಟನ್‌ನ ಪ್ರತಿಶತ 70 ರಷ್ಟು ಜೀವನ ಸಂಶೋಧನೆ ಆಗಿತ್ತು. ಅರ್ಥದಷ್ಟಾದರೂ ಸಂಶೋಧನೆ ಮಾಡುವುದು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು ಎಂದರು. ಲೇಖನ ಬರೆಯುವುದಷ್ಟೇ ಶೋಧನೆ ಅಲ್ಲ, ದಿನನಿತ್ಯದ ಕಾರ್ಯಗಳಲ್ಲಿ ತೊಡಗುವುದು ಕೂಡ ಸಂಶೋಧನೆ ಇದೆ. ಬರೆಯುವುದೆಲ್ಲ ಸಂಶೋಧನೆ ಅಲ್ಲ. ಪರಿಣಾಮಕಾರಿ ವಿಷಯ, ವಾಸ್ತವತೆ ತಿಳಿಸುವಂತಹದು. ಆಗಿನ ಕಾಲದಲ್ಲಿ ಇಂಟರ್‌ನೆಟ್‌ನಂತಹ ಸೌಲಭ್ಯಗಳಿರಲಿಲ್ಲ. ಕೈ ಬರಹದ ಮುಖಾಂತರ ಪ್ರಬಂಧಗಳನ್ನು ಮಂಡಿಸಲಾಗುತ್ತಿತ್ತು. ಆಧುನಿಕ ತಂತ್ರಜ್ಞಾನದ ಪ್ರಭಾವದಿಂದ ಸಾಕಷ್ಟು ಬದಲಾವಣೆಗಳು ಸಂಶೋಧನೆಯಲ್ಲಿ ಆಗಿರುವುದನ್ನು ಕಾಣಬಹುದು ಎಂದರು. ಇತ್ತೀಚಿನ ದಿನಗಳಲ್ಲಿ ಸಂಶೋಧನೆಗಳು ಪಾರದರ್ಶಕತೆ ಕಳೆದುಕೊಳ್ಳುತ್ತಿರುವುದು ವಿಪರ್ಯಾಸ ಎಂದರು.

ಎಸ್.ಬಿ. ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಕೆ.ಜಿ.ಪೂಜಾರಿ ಅಧ್ಯಕ್ಷತೆ ವಹಿಸಿದ್ದರು.

ಬಿಎಲ್‌ಡಿಇ ಸಂಸ್ಥೆಯ ಎಸ್‌ಎಸ್‌ಎಂ ಔಷಧಿಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರದ ಪ್ರಾಧ್ಯಪಕ ಡಾ.ಆರ್.ಬಿ.ಕೊಟ್ನಾಳ, ಡಾ.ಎಸ್.ಟಿ.ಮೇರವಾಡೆ, ಡಾ. ಆರ್. ಎಚ್.ಬಿದರಿ. ಎಸ್.ಜೆ.ಪವಾರ. ಉಷಾದೇವಿ ಹಿರೇಮಠ ಮೊದಲಾದವರು ಉಪಸ್ಥಿತರಿದ್ದರು.

ಜ್ಯೋತಿ ಕೋರಿ ಪ್ರಾರ್ಥನೆ ಹಾಡಿದರು. ಎಂ.ಎಂ.ಮಿರ್ದೆ ಸ್ವಾಗತಿಸಿದರು.



**ವಿಜಯಪುರದ ಎಸ್.ಬಿ. ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ನಡೆದ ಕಾರ್ಯಾಗಾರಕ್ಕೆ ಡಾ.ಕೆಎಲ್‌ಎನ್ ಮೂರ್ತಿ ಚಾಲನೆ ನೀಡಿದರು.**

ದಿನಾಂಕ 19.1.2018 ಸಂಯುಕ್ತ ಕರ್ನಾಟಕ

ದಿನ ಪತ್ರಿಕೆ